# ಮಾರುಕಟ್ಟೆ ಲಭಿಸಿದರೆ ನೀರಾದಿಂದ ಉತ್ತಮ ಲಾಭ

## ನೀರಾ ಉತ್ಪಾದನೆ ತಾಂತ್ರಿಕತೆ ಕಾರ್ಯಾಗಾರ ಉದ್ಘಾಟಿಸಿ ಸಿಪಿಸಿಆರ್ಐ ನಿರ್ದೇಶಕ ಡಾ| ಚೌಡಪ್ಪ







ಕಾಸರಗೋಡು, ಮಾ. 10: ಕಾಸರಗೋಡು ಚೇಂಬರ್ಸ್ ಆಫ್ ಕಾಮರ್ಸ್ ಮತ್ತು ಸಿಪಿಸಿಆರ್ಐ ಜಂಟಿಯಾಗಿ ಆಯೋಜಿಸಿದ ಒಂದು ದಿನದ ನೀರಾ (ಕಲ್ಪರಸ) ಉತ್ಪಾದನೆ ತಾಂತ್ರಿಕತೆ ಕಾರ್ಯಾಗಾರ ಸಿಪಿಸಿಆರ್ಐ ಯಲ್ಲಿ ಜರಗಿತು.

ಸಿಪಿಸಿಆರ್ಐ ನಿರ್ದೇಶಕ ಡಾ| ಚೌಡಪ್ಪ ಅವರು ಕಾರ್ಯಾಗಾರವನ್ನು ಉದ್ಘಾಟಿಸಿ ಇಂದು ತೆಂಗಿನಿಂದ ಉತ್ಪಾದಿಸುವ ನೀರಾ (ಕಲ್ಪರಸ) ಬೇಡಿಕೆಯನ್ನು ಪಡೆಯುತ್ತಿದ್ದು, ಉತ್ತಮ ಮಾರುಕಟ್ಟೆ ಲಭಿಸಿದರೆ ಸಾಕಷ್ಟು ಲಾಭಗಳಿಸಬಹುದೆಂದರು.

ಸಿಪಿಸಿಆರ್ಐಯಲ್ಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೀರಾ ಪ್ರಾಮುಖ್ಯತೆಯನ್ನು ಪ್ರಚಾರ ಮಾಡಲು ಸಿಪಿಸಿಆರ್ಐ ಸಂಸ್ಥೆ ಮತ್ತು ಕಾಸರಗೋಡು ಚೇಂಬರ್ಸ್ ಆಫ್ ಕಾಮರ್ಸ್ ಜಂಟಿಯಾಗಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಸಿಪಿಸಿಆರ್ಐಯ ತೋಟದಲ್ಲಿ ಪ್ರಾತ್ಯಕ್ಷಿಕೆ ನಡೆಯಿತು. ಚೇಂಬರ್ ಆಫ್ ಕಾಮರ್ಸ್ ಕಣ್ಣೂರಿನ ಸುಶೀಲ್ ಆರೋನ್ ಅಧ್ಯಕ್ಷತೆ ವಹಿಸಿದರು. ನೀರಾ ಉತ್ಪಾದನೆ ಮತ್ತು ತಾಂತ್ರಿಕತೆ, ಮಾರುಕಟ್ಟೆ ಮೊದಲಾದ ವಿಷಯಗಳ ಬಗ್ಗೆ ಡಾ| ಕೆ.ಡಿ. ಹೆಬ್ಬಾರ್, ಡಾ| ಸಿ. ತಂಬಾನ್ ಮಾತನಾಡಿದರು. ಡಾ| ಮಹೇಶ್ವರಪ್ಪ ಅವರು ಇದೇ ಸಂದರ್ಭ ವಿವಿಧ ವಿಷಯಗಳ ಬಗ್ಗೆ ಮಾತನಾಡಿದರು. ಚೇಂಬರ್ ಆಫ್ ಕಾಮರ್ಸ್ ಪ್ರಧಾನ ಕಾರ್ಯದರ್ಶಿ ಶ್ಯಾಂ ಪ್ರಸಾದ್ ಸ್ವಾಗತಿಸಿದರು. ಎ.ಸಿ. ಮ್ಯಾಥ್ಯೂ ವಂದಿಸಿದರು.

**ಅಮಲು ರಹಿತ ಕಲ್ಪರಸ:** ನೈಸರ್ಗಿಕವಾಗಿ ಪಡೆಯಬಹುದಾದ ಆಲ್ಕೋಹಾಲ್ ರಹಿತ, ಪೌಷ್ಟಿಕಾಂಶವುಳ್ಳ ನೈಸರ್ಗಿಕ ಪಾನೀಯ ಕಲ್ಪರಸ ಅಥವಾ ನೀರಾ. ಇದರಲ್ಲಿ ಪ್ರಮುಖವಾಗಿ ಸೋಡಿಯಂ, ಪೊಟ್ಯಾಷಿಯಂ, ಕಬ್ಬಿಣ, ಸತು ಮುಂತಾದ ಖನಿಜಗಳು, ವಿಟಮಿನ್ಸ್, ಅಮೈನೊ ಆಸಿಡ್, ಆ್ಯಂಟಿಕ್ಸಿಡೆಂಟ್

ಪುಟ 3